ಇ) ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಪ್ರಥಮ ಸೆಮಿಸ್ಟರಿನಲ್ಲಿ ಪರೀಕ್ಷೆಗೆ ಕುಳಿತುಕೊಳ್ಳುವಲ್ಲಿ ಪರವಾನಿಗಿ ನೀಡದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಹಾಗಾಗಿದ್ದಲ್ಲಿ ವಿದ್ಯಾರ್ಥಿಗಾಗುವ ಒಂದು ಸೆಮಿಸ್ಟರಿನ ನಷ್ಟಕ್ಕೆ ಸರಕಾರವು ಯಾವ ಪರಿಹಾರ ನೀಡಬಲ್ಲದು ?

ಡಾ॥ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮಂತ್ರಿ, ಕುಟುಂಬ ಕಲ್ಯಾಣ ಸಚಿವರು).—

ಅ) ೧೯೮೫-೮೬ರ ಸಾಲಿನಲ್ಲಿ ಮೊದಲ ಹಂತದಲ್ಲಿ ಆಯ್ಕೆಯಾದ ಯಾವ ವಿದ್ಯಾರ್ಥಿಗೂ ಅಕ್ಟೋಬರ್ ನಂತರ ಕೊನೆಯ ಹಂತದಲ್ಲಿ ಕಾಲೇಜಿಗೆ ಸೇರ್ಪಡೆಯಾಗಬೇಕಾದ ಪರಿಸ್ಥಿತಿ ಉಂಟಾಗಿಲ್ಲ. ಮೊದಲ ಹಂತದಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳು ಸೆಪ್ಟೆಂಬರ್ ೨೪ರ ಮುನ್ನವೇ ಕಾಲೇಜುಗಳಲ್ಲಿ ಪ್ರವೇಶ ಪಡೆದಿದ್ದರು. ಎರಡು ಮತ್ತು ಮೂರನೇ ಹಂತದಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳು ಕ್ರಮವಾಗಿ ೭-೧೦-೧೯೮೫ ಮತ್ತು ೨೪-೧೦-೧೯೮೫ರ ಮುನ್ನ ಕಾಲೇಜಿಗೆ ಪ್ರವೇಶ ಪಡೆದಿದ್ದರು.

ಆ) ಮೇಲಿನ ಪ್ರಶ್ನೆಗೆ ನೀಡಿರುವ ಉತ್ತರದ ಪ್ರಯುಕ್ತ ಯಾವುದೇ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಮೈಸೂರು ಅಥವಾ ರಾಜ್ಯದ ಇತರ ಯಾವುದೇ ವಿಶ್ವವಿದ್ಯಾನಿಲಯದಲ್ಲಿನ ವೈದ್ಯಕೀಯ ಕಾಲೇಜಿಗೆ ಅಕ್ಟೋಬರ್ ೩೦, ೧೯೮೫ರ ಮುನ್ನ ಪ್ರವೇಶಪಡೆದ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಕುಳಿತುಕೊಳ್ಳಲು ಪರವಾನಗಿ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಈ) ಅಕ್ಟೋಬರ್ ೩೦, ೧೯೮೫ರ ಮುನ್ನ ಪ್ರವೇಶ ಪಡೆದ ಯಾವುದೇ ವಿದ್ಯಾರ್ಥಿಗೆ ಒಂದು ಸೆಮಿಸ್ಟರಿನ ನಷ್ಟವಾಗುವ ಸಂಭವವಿಲ್ಲ. ಆದ್ದರಿಂದ ಯಾವುದೇ ಪರಿಹಾರ ನೀಡುವ ಪ್ರಶ್ನೆಯೇ ಇಲ್ಲ.

ಶ್ರೀ ಬಸವರಾಜ್.—ಮಾನ್ಯ ಅಧ್ಯಕ್ಷರೇ, ೨೪-೧೦-೮೫ರ ಮುನ್ನವೇ ಆಯ್ಕೆಯಾದ ವಿದ್ಯಾರ್ಥಿಗಳು ಕಾಲೇಜಿಗೆ ಪ್ರವೇಶ ಪಡೆದಿದ್ದಾರೆಂದು ಉತ್ತರದಲ್ಲಿ ತಿಳಿಸಿರುತ್ತಾರೆ. ಆದರೆ, ಪ್ರಥಮ ೨೦೦ ಜನ ವಿದ್ಯಾರ್ಥಿಗಳು ಅಕ್ಟೋಬರ್ ಒಳಗೆ ಕಾಲೇಜಿಗೆ ಸೇರುವುದಕ್ಕೆ ಆಗಿಲ್ಲ. ಇದರಿಂದ ಒಂದು ಸೆಮಿಸ್ಟರ್ ನಷ್ಟವಾಗುವುದಿಲ್ಲವೇ ?

ಡಾ॥ ಹೆಚ್.ಎಲ್. ತಿಮ್ಮೇಗೌಡ.-ಆ ರೀತಿ ಟೈಂ ಸಾಕಾಗಲಿಲ್ಲವೆಂದು ಯಾರೂ ಮನವಿ ಮಾಡಿಲ್ಲ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವಂಥ ಪ್ರಶ್ನೆ ಕೂಡ ಬರುವುದಿಲ್ಲ.

ಶ್ರೀ ಬಸವರಾಜ್.—ನಾನು ವಿವರ ಕೊಟ್ಟರೆ ಕ್ರಮ ತೆಗೆದುಕೊಳ್ಳುತ್ತೀರಾ ?

ಡಾ॥ ಹೆಚ್.ಎಲ್. ತಿಮ್ಮೇಗೌಡ.—ಮಾಹಿತಿ ಇದ್ದರೆ ಕಳುಹಿಸಿಕೊಡಿ.

ಶಿವಮೊಗ್ಗ ಜಿಲ್ಲೆಯ ಪ್ರಾಥಮಿಕ ಆರೋಗ್ಯ ಘಟಕಗಳಲ್ಲಿನ ವೈದ್ಯಕೀಯ ಅಧಿಕಾರಿಗಳು

೨೬. ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಆರೋಗ್ಯ, ಕುಟುಂಬ ಕಲ್ಯಾಣ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಪ್ರತಿ ತಾಲ್ಲೂಕಿನಲ್ಲಿ ಇರುವ ಪ್ರಾಥಮಿಕ ಆರೋಗ್ಯ ಘಟಕಗಳೆಷ್ಟು,

ಆ) ಪ್ರತಿ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಆರೋಗ್ಯ ಘಟಕಗಳ ವೈದ್ಯಾಧಿಕಾರಿಗಳೆಷ್ಟು,

ಇ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕೈಕೊಂಡ ಕ್ರಮವೇನು,

ಈ) ಶಿಕಾರಿಪುರ ತಾಲ್ಲೂಕಿನಲ್ಲಿ ಖಾಲಿ ಇರುವ ಪ್ರಾಥಮಿಕ ಆರೋಗ್ಯ ಘಟಕಗಳಿಗೆ ಈ ಹಿಂದಿನ ವಿಧಾನಸಭಾ ಅಧಿವೇಶನದಲ್ಲಿ ಮಹಿಳಾ ವೈದ್ಯಾಧಿಕಾರಿಗಳನ್ನು ಕೆ.ಪಿ.ಎಸ್.ಸಿ.ಯಿಂದ ನೇಮಿಸಿಕೊಂಡ ತಕ್ಷಣ ಭರ್ತಿ ಮಾಡುವುದಾಗಿ ಆಶ್ವಾಸನೆ ಕೊಟ್ಟಿದ್ದು ನಿಜವೇ ?

ಡಾ॥ ಹೆಚ್.ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಶೂನ್ಯ

ಆ) ಪ್ರಶ್ನೆ ಇಲ್ಲ

ಇ) ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ ನೇರ ನೇಮಕಾತಿ ಮೂಲಕ ಹಾಗೂ ಸ್ನಾತಕೋತ್ತರ ಪದವಿ ಶಿಕ್ಷಣ ಮುಂಗಡಿಸಿಕೊಂಡು ಬರುವ ಸೇವೆಯಲ್ಲಿರುವ ವೈದ್ಯರುಗಳ ಮರು ತೈನಾತಿ ಮೂಲಕ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಈ) ಇಲ್ಲ. ಶಿಕಾರಿಪುರ ತಾಲ್ಲೂಕಿನಲ್ಲಿ ಸಂಯುಕ್ತ ಆಸ್ಪತ್ರೆ ಶಿಕಾರಿಪುರ ಸೇರಿದಂತೆ ೯ ಪ್ರಾಥಮಿಕ ಆರೋಗ್ಯ ಘಟಕಗಳಿವೆ, ಶಿಕಾರಿಪುರ ವಿನಹ ಬೇರೆ ಪ್ರಾಥಮಿಕ ಆರೋಗ್ಯ ಘಟಕಗಳಿಗೆ ಮಹಿಳಾ ವೈದ್ಯರ ಹುದ್ದೆ ಮಂಜೂರಾಗಿರುವುದಿಲ್ಲಾ. ಪ್ರಾಥಮಿಕ ಆರೋಗ್ಯ ಕೇಂದ್ರ ಸಿರಾಳಕೊಪ್ಪದಲ್ಲಿ ಪುರಂಷ ಹಾಗೂ ಮಹಿಳಾ ವೈದ್ಯಾಧಿಕಾರಿಗಳಿದ್ದಾರೆ. ಪ್ರಾಥಮಿಕ ಆರೋಗ್ಯ ಘಟಕಗಳಲ್ಲಿ ಮಹಿಳಾ ವೈದ್ಯರ ಹುದ್ದೆಯೇ ಇರುವುದಿಲ್ಲ ಆದ್ದರಿಂದ ಮಹಿಳಾ ವೈದ್ಯರುಗಳನ್ನು ಆರೋಗ್ಯ ಘಟಕಗಳಿಗೆ ಹಾಕಂತ್ತೇವೆಂದು ಆಶ್ವಾಸನೆ ಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ, ನನ್ನ ಪ್ರಶ್ನೆಗೆ ಮಾನ್ಯ ಮಂತ್ರಿಯವರು ಸಮರ್ಪಕವಾಗಿ ಉತ್ತರ ಕೊಟ್ಟಿಲ್ಲ. ಶಿಕಾರಿಪುರ ತಾಲ್ಲೂಕಿನಲ್ಲಿರುವ ೯ ಪ್ರಾಥಮಿಕ ಘಟಕಗಳಲ್ಲಿ ೬ ಘಟಕಗಳಲ್ಲಿ ವೈದ್ಯರಿಲ್ಲವೆಂದು ಕಳೆದ ಅಧಿವೇಶನದಲ್ಲಿ ಪ್ರಸ್ತಾಪ ಮಾಡಿದಾಗ ಮಾನ್ಯ ಮಂತ್ರಿಯವರು ಅಧಿವೇಶನ ಮುಂಗಿಯವುದರೊಳಗೆ ವೈದ್ಯರನ್ನು ನೇಮಕ ಮಾಡುತ್ತೇವೆಂದು ಭರವಸೆ ಕೊಟ್ಟಿದ್ದರೂ ಇದುವರೆವಿಗೂ ನೇಮಕ ಮಾಡಿಲ್ಲ.

ಶ್ರೀ ಡಿ. ಬಿ. ಇನಾಂದಾರ್.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಲೋಕಸೇವಾ ಆಯೋಗದವರಿಗೆ ೧೫೦ ವೈದ್ಯರ ಹುದ್ದೆಗಳನ್ನು ತುಂಬಬೇಕೆಂದು ತಿಳಿಸಿದ್ದೇವೆ. ಅಲ್ಲಿಂದ ಬಂದ ಕೂಡಲೆ ಖಾಲಿ ಇರತಕ್ಕ ಜಾಗಗಳಿಗೆ ವೈದ್ಯರುಗಳನ್ನು ಹಾಕಲಾಗುವುದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಶಿಕಾರಿಪುರ ತಾಲ್ಲೂಕಿನಲ್ಲಿರುವ ಕಂಬೈನ್ಡ್ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದ ಮಹಿಳಾ ವೈದ್ಯರು ಲಾಂಗ್ ಲೀವ್ ಹಾಕಿ ಹೋಗಿದ್ದಾರೆ. ಆ ಜಾಗಕ್ಕೆ ಒಬ್ಬರು ಮಹಿಳಾ ವೈದ್ಯರನ್ನು ಹಾಕಿಂಪುದು ಬೇಡವೆ ? ೧೫೦-೧೬ ಸಾವಿರ ರೂಪಾಯಿಂಗಳ ಔಷಧಿಯನ್ನು ಕೊಡುತ್ತಿದ್ದೀರಿ, ಅದೆಲ್ಲಾ ಹಾಳಾಗಿ ಹೋಗುತ್ತಿದೆ. ತಾಲ್ಲೂಕಿನ ಜನಕ್ಕೆ ತಾನು ಏನು ಉತ್ತರ ಕೊಡಲಿ? ಹತ್ತು ಜನ ಇರುವ ಕಡೆ ಒಬ್ಬಬ್ಬರನ್ನು ತೆಗೆದು ಖಾಲಿ ಇರತಕ್ಕ ಜಾಗಗಳಿಗೆ ಹಾಕಿ.

ಶ್ರೀ ಎಚ್.ಎಲ್. ತಿಮ್ಮೇಗೌಡ.—ಈ ತಿಂಗಳು ೧೭ರಂದು ಸಂದರ್ಶನ ನಡೆಯಲಿದೆ. ಮಾರ್ಚ್ ೩೧ರೊಳಗೆ ಖಾಲಿ ಇರತಕ್ಕ ಜಾಗಗಳಿಗೆ ವೈದ್ಯರನ್ನು ನೇಮಕ ಮಾಡುತ್ತೇವೆ.

ಅಧ್ಯಕ್ಷರು.—ವಸಂತ ಬಂಗೇರಾ ಗೈರುಹಾಜರಿ.

ಪ್ರತಾಪಚಂದ್ರಶೆಟ್ಟಿ ಗೈರು ಹಾಜರಿ.

ಶ್ಯಾನಪ್ಪ ಗೈರು ಹಾಜರಿ.

ಎಂ. ವೀರಯ್ಯ ಸ್ವಾಮಿ ಗೈರು ಹಾಜರಿ.

ರಾಜ್ಯದಲ್ಲಿ ಕುಷ್ಠರೋಗ ಪೀಡಿತರನ್ನು ಗುರುತಿಸುವುದು

೩೭೩. ಶ್ರೀ ಬಿ. ರಾಜುಗೌಡ (ಪನೂರು).—ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಯಾವ ಯಾವ ತಾಲ್ಲೂಕಿನಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಕುಷ್ಠ ರೋಗಿಗಳಿದ್ದಾರೆ?

ಆ) ಕುಷ್ಠ ರೋಗವನ್ನು ಗುರುತಿಸುವ ಜವಾಬ್ದಾರಿಯನ್ನು ಯಾರಿಗೆ ವಹಿಸಲಾಗಿದೆ?